ರೂಪಾಯಿ ಇದೆ. ಈಗ 18 ಕೋಟಿ ರೂ ಎಂದು ಹೇಳುತ್ತಿದ್ದೀರಿ. ನೀವು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದೀರಿ.

ಶ್ರೀ ಡಿ.ಬಿ. ಇನಾಂದಾರ್ :- ತಪ್ಪು ಮಾಹಿತಿಯಲ್ಲ. ಇದು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಿಂದ ಬಂದಂಥ ಕಾಗದಪತ್ರ ಎಂದು ತಮ್ಮ ಮುಖಾಂತರ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಿಳಿಸುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ :- ಈ ಕಿಯೋನಿಕ್ಸ್ ಮತ್ತು ಹೆಚ್‌ಡಿಎಫ್‌ಸಿ ನಡುವೆ ಅಗ್ರಿಮೆಂಟ್ ಏನಿದೆ, ಅದು 23 ಕೋಟಿ ರೂಪಾಯಿ ಅಗ್ರಿಮೆಂಟ್. ಅದನ್ನು ಮುಚ್ಚಿಡುತ್ತಿದ್ದೀರಿ. ದಯವಿಟ್ಟು ಅದನ್ನು ಸದನದ ಮುಂದಿಡಿ. ಅದನ್ನು ಮುಚ್ಚಿಟ್ಟು 18 ಕೋಟಿ ರೂಪಾಯಿ ಎಂದು ಸಾಧನೆ ಮಾಡುತ್ತಿದ್ದೀರಲ್ಲಾ, ಇದು ಸರಿಯಲ್ಲ. ಮಹಾನಗರಕ್ಕೆ ಅನ್ಯಾಯ ಮಾಡಿದ್ದೀರಿ. ನೀವು ಅಧಿಕಾರಿಗಳ ಮಾತನ್ನು ಕೇಳುವಂಥದ್ದಲ್ಲ. ನೀವೊಂದು ರಾಜಕೀಯ ನಿರ್ಣಯವನ್ನು ಕೈಗೊಳ್ಳಿ. ಅವರು ಅಧಿಕಾರಿಗಳು ಬೇಕಾದ್ದು ಹೇಳುತ್ತಾರೆ. ಆ ಅಗ್ರಿಮೆಂಟ್ ಕಾಪಿಯನ್ನು ಸದನದ ಮುಂದಿಡಿ. ಸದನದ ಮುಂದೆ ಇಡುವುದಕ್ಕೆ ಆಗುತ್ತದೋ ಇಲ್ಲವೋ ದಯವಿಟ್ಟು ಅವರು ಹೇಳಬೇಕು. ಅಗ್ರಿಮೆಂಟ್ ಕಾಪಿ ಇಟ್ಟರೆ 23 ಕೋಟಿ ರೂಪಾಯಿ ವಿಷಯ ಹೊರಗೆ ಬರುತ್ತದೆ.

ಶ್ರೀ ಡಿ.ಬಿ. ಇನಾಂದಾರ್ :- ಮಾನ್ಯ ಅಧ್ಯಕ್ಷರೇ, ಅಗ್ರಿಮೆಂಟ್ ಎಲ್ಲಾ ಇದೆ. ಅವರ ಪ್ರಕಾರ 10.43 ಕೋಟಿ ರೂಪಾಯಿಗಳು ನಮಗೆ ಬರಬೇಕಾಗಿದೆ. ಈ ಮಾಹಿತಿಯನ್ನು ಬೇಕಾದರೆ ತಮಗೆ ನಾನು ಕೊಟ್ಟು ಕಳುಹಿಸುತ್ತೇನೆ.

ಅಧ್ಯಕ್ಷರು :- ಮಾನ್ಯ ಇನಾಂದಾರ್‌ರವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಗಂಭೀರವಾದ ಪ್ರಶ್ನೆಯನ್ನು ಎತ್ತಿದ್ದಾರೆ. ತಾವು ತಮ್ಮ ಕಛೇರಿಗೆ ಕರೆಸಿ ಅಲ್ಲಿ ಏನೇನು ಮಾಡಬೇಕು ಎಂಬುದನ್ನು ನೋಡಿ ಸಮಸ್ಯೆಗಳನ್ನು ಬಗೆಹರಿಸಿ. ಸುಮ್ಮನೆ ಇಲ್ಲಿ ಡಿಸ್ಕಷನ್ ಬೇಡಿ. ಅಥವಾ ನಮ್ಮ ಕಛೇರಿಗೆ ಬನ್ನಿ. ಎಲ್ಲಾ ಕುಳಿತುಕೊಂಡು ನೋಡೋಣ. ನಮ್ಮ ಕಛೇರಿಗೆ ತನ್ನಿ ನೋಡೋಣ.

ಶ್ರೀ ಡಿ.ಬಿ. ಇನಾಂದಾರ್ :- ಮಾನ್ಯ ಅಧ್ಯಕ್ಷರೇ, ಎಲ್ಲವನ್ನೂ ತಮ್ಮ ಕಛೇರಿಗೆ ಕರೆಸುತ್ತೇನೆ.

ಅಧ್ಯಕ್ಷರು :- ಆಯಿತು ನೋಡೋಣ ನಮ್ಮ ಕಛೇರಿಗೆ ತಂದು ತೋರಿಸುತ್ತಾರೆ. ತಮ್ಮನ್ನೂ ಕರೆಯುತ್ತೇನೆ. ಮುಂದಿನ ಪ್ರಶ್ನೆ ಶ್ರೀ ಕೆ. ಗೋಪಾಲ್ ಪೂಜಾರಿಯವರು.

(ಮಾನ್ಯ ಕೆ. ಗೋಪಾಲ ಪೂಜಾರಿಯವರು ಗೈರು ಹಾಜರಾಗಿದ್ದರು)

## ಗೌರಿಬಿದನೂರಿನಲ್ಲಿ ನೂತನ ಕ್ರೀಡಾಂಗಣ ನಿರ್ಮಾಣ

19 (166) ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ (ಗೌರಿಬಿದನೂರು) ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗೌರಿಬಿದನೂರು ಪಟ್ಟಣದಲ್ಲಿ ಹೊಸದಾಗಿ ಕ್ರೀಡಾಂಗಣ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು? ಯಾವ ಸಮಯದಲ್ಲಿ ಕ್ರೀಡಾಂಗಣ ಕಾಮಗಾರಿಯನ್ನು ಪೂರೈಸಿ ಕ್ರೀಡಾಪಟುಗಳಿಗೆ ಅನುಕೂಲ ಮಾಡಿಕೊಡಲಾಗುವುದು?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಹೌದು.

ಆ) ಇದರ ಅಂದಾಜು ವೆಚ್ಚ ರೂ. 80.00 ಲಕ್ಷ. ಕ್ರೀಡಾಂಗಣ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲು ಜಿಲ್ಲಾ ಪಂಚಾಯಿತಿಗೆ ರೂ. 8.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಕಾಮಗಾರಿ ಪ್ರಾರಂಭಿಸಬೇಕಾಗಿದೆ.

ಶ್ರೀ ಎನ್. ಹೆಚ್. ಶಿವಶಂಕರ ರೆಡ್ಡಿ :- ಮಾನ್ಯ ಅಧ್ಯಕ್ಷರೇ, ಇದರಲ್ಲಿ ಏನು ವಿಚಾರ ಕೊಟ್ಟಿದ್ದಾರೆಂದರೆ ಇದು ಮಂಜೂರಾಗಿ ಈಗಾಗಲೇ ಆರು ತಿಂಗಳಾಗಿದೆ, ಒಂದು ವರ್ಷದ ಮೇಲಾಗಿದೆ. ಆದರೂ ಕೂಡ ಇದುವರೆಗೂ ಕೆಲಸವನ್ನು ಪ್ರಾರಂಭ ಮಾಡಿಲ್ಲ. ಇದನ್ನು ಯಾವಾಗ ಮಾಡಿಸುತ್ತಾರೆ ಎನ್ನುವ ಬಗ್ಗೆ ಸ್ಪಷ್ಟವಾಗಿ ಮಂತ್ರಿಗಳು ಹೇಳಬೇಕು. ಮತ್ತು ಎಂಟು ಲಕ್ಷ ರೂಪಾಯಿಗಳ ಅನುದಾನವನ್ನೇನು ತೋರಿಸಿದ್ದಾರೆ, ಅದು ಜಿಲ್ಲಾ ಪಂಚಾಯಿತಿಯ ಅನುದಾನ. ಸರ್ಕಾರದಿಂದ ಏನೂ ಬಂದಿಲ್ಲ. ಎಂಭತ್ತು ಲಕ್ಷ ರೂಪಾಯಿ ಎಸ್ಟಿಮೇಟ್ ಇರುವುದರಿಂದ ನೇರವಾಗಿ ಸರ್ಕಾರದಿಂದಲೂ ಕೂಡ ಸ್ವಲ್ಪ ಅನುದಾನವನ್ನು ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

**MR. SPEAKER:-** This is only pertaining to Gowribidanur and not Bagepalli.

ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ :- ಯಾವಾಗ ಪ್ರಾರಂಭ ಮಾಡುತ್ತಾರೆಂದು ನಿಖರವಾಗಿ ಮಾನ್ಯ ಮಂತ್ರಿಗಳು ಭರವಸೆ ಕೊಡಬೇಕೆಂದು ಹೇಳಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಕ್ರೀಡಾಂಗಣದ ಬಗ್ಗೆ ಹೇಳುವುದಾದರೆ ರಾಜ್ಯದಲ್ಲಿ 50 ಕ್ರೀಡಾಂಗಣ....

**ಅಧ್ಯಕ್ಷರು :-** ಮಾನ್ಯ ಕೃಷ್ಣಮೂರ್ತಿಯವರೇ, ಇದು ಗೌರಿಬಿದನೂರು ಕ್ರೀಡಾಂಗಣಕ್ಕೆ ಸಂಬಂಧಪಟ್ಟ ವಿಚಾರ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ನೀವು ಬರೀ ಒಂದು ಜಿಲ್ಲೆಗೆ ಸೀಮಿತ ಮಾಡಬೇಡಿ.

**MR. SPEAKER:-** No, You please hear me. ಅವರು ಗೌರಿಬಿದನೂರು ಕ್ರೀಡಾಂಗಣದ ಬಗ್ಗೆ ಕೇಳಿರುವುದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಕ್ರೀಡೆಗೆ ಪ್ರೋತ್ಸಾಹ ಕೊಡುತ್ತಿಲ್ಲ ಎನ್ನುವುದಕ್ಕೋಸ್ಕರ ಕೇಳುತ್ತಿದ್ದೇನೆ. ಸದಸ್ಯರುಗಳು ಹೇಳಿದ್ದನ್ನೂ ಮಾನ್ಯ ಸಭಾಧ್ಯಕ್ಷರು ಸಹ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎನ್. ಸಂಪಂಗಿ :- ಎಲ್ಲಾ ಕಡೆ ಈ ಸಮಸ್ಯೆ ಇದೆ.

**MR. SPEAKER:-** No, I cannot allow others. ಗೌರಿಬಿದನೂರು ಬಗ್ಗೆ ಹೇಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- 50 ಕ್ರೀಡಾಂಗಣಗಳ ಕೆಲಸ ಅರ್ಧಂಭರ್ಧವಾಗಿದೆ. ಕೇಂದ್ರ ಸರ್ಕಾರದ ನೆರವು ಸಿಕ್ಕಿಲ್ಲ.

**MR. SPEAKER:-** No. It is not a general question. It is only pertaining to Gowribidanur. ಅವರು ಗೌರಿಬಿದನೂರಿನ ಬಗ್ಗೆ ಕೇಳಿರುವುದು. No I cannot allow.

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಶಿವಶಂಕರ ರೆಡ್ಡಿಯವರು ಗೌರಿಬಿದನೂರು ಪಟ್ಟಣಕ್ಕೆ ಕ್ರೀಡಾಂಗಣ ನಿರ್ಮಾಣ ಮಾಡುವ ಬಗ್ಗೆ ಪ್ರಶ್ನೆ ಕೇಳಿದ್ದಾರೆ, ಅವರಿಗೆ ಗೊತ್ತಿರುವ ಹಾಗೆ ಸರ್ಕಾರಿ ಆಜ್ಞೆಯನ್ನು ಮಾಡಿ ಒಟ್ಟು 80 ಲಕ್ಷ ರೂ. ಗಳ ಯೋಜನೆಯಲ್ಲಿ ಅದು ಎಕರೆ ಜಮೀನನ್ನು ನಮ್ಮ ಇಲಾಖೆಗೆ ಹಸ್ತಾಂತರಿಸಿದ್ದಾರೆ, ಆ ರೀತಿ ಹಸ್ತಾಂತರಿಸಿದ ಮೇಲೆ ಜಿಲ್ಲಾ ಪಂಚಾಯಿತಿ ಅನುದಾನದಲ್ಲಿ, ಅದು ಜಿಲ್ಲಾ ಪಂಚಾಯಿತಿ ಅನುದಾನವಾಗಿರಬಹುದು, ಸರ್ಕಾರದ ಅನುದಾನವೇ ಅದು. ಅದರಲ್ಲಿ ಕ್ರೀಡೆಗೋಸ್ಕರ ಎಂಟು ಲಕ್ಷ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡುತ್ತೇವೆಂದು ಹೇಳಿ ಒಪ್ಪಿಕೊಂಡಿದ್ದಾರೆ. ಅದಷ್ಟು ಬೇಗ ಅವರನ್ನೇ ಕೇಳಿ ಅವರು ಯಾವಾಗ ಕ್ರೀಡಾಂಗಣ ಪ್ರಾರಂಭ ಮಾಡುವುದಕ್ಕೆ ಗುದ್ದಲಿ ಪೂಜೆ ಇಟ್ಟುಕೊಳ್ಳುತ್ತಾರೋ ಅವತ್ತೇ ಬೇಕಾದರೆ ನಾವು ಪ್ರಾರಂಭ ಮಾಡಿಸುವುದಕ್ಕೆ ತಯಾರಿದ್ದೇವೆ ಎಂದು ಹೇಳುತ್ತೇನೆ.

**MR. SPEAKER:-** Very good.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ನೀವು ರಾಜ್ಯಾದ್ಯಂತ ಪ್ರವಾಸ ಮಾಡಿ ನೋಡಬೇಕು.

ಅಧ್ಯಕ್ಷರು :- ಗುದ್ದಲ್ಲಿ ಪೂಜೆ ಇಟ್ಟುಕೊಳ್ಳಿ ಎಂದು ಹೇಳುತ್ತಿದ್ದಾರಲ್ಲಾ. ಇದು ಎಲ್ಲಾ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದಲ್ಲ.

(ಗೊಂದಲ)

ಶ್ರೀ ಎನ್. ಸಂಪಂಗಿ :- ಯುವಕರಿಗೆ ಅನ್ಯಾಯ ಮಾಡಬೇಡಿ ಅಧ್ಯಕ್ಷರೇ.

ಅಧ್ಯಕ್ಷರು :- ಸ್ವಲ್ಪ ತಡೆಯಿರಿ. ಗುದ್ದಲಿ ಪೂಜೆ ಇಟ್ಟುಕೊಳ್ಳಿ ಎಂದು ಅವರು ಹೇಳುತ್ತಿದ್ದಾರಲ್ಲಾ, ನೀವು ಏಕೆ ಈ ರೀತಿ ಮಾಡಬೇಕು?

(ಗೊಂದಲ)

ಅಧ್ಯಕ್ಷರು :- ಮುಂದಿನ ಪ್ರಶ್ನೆ ಮಾನ್ಯ ಹನುಮೇಗೌಡರದು. Plese excuse me.

(ಗೊಂದಲ)

ಅಧ್ಯಕ್ಷರು :- ಇದು ಪಿಡಬ್ಲ್ಯೂಡಿ ಮಿನಿಸ್ಟರ್ ಪ್ರಶ್ನೆ. Don't disturb the Minister.

(ಗೊಂದಲ)

ಶ್ರೀ ಎನ್. ಸಂಪಂಗಿ :- ಕ್ರೀಡಾಪಟುಗಳಿಗೆ ನಾವು ಅವಮಾನ ಮಾಡುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು :- ಅರ್ಧಗಂಟೆ ಚರ್ಚೆಗೆ ನೀವು ಬರೆದು ಕಳುಹಿಸಿ. ನಾನು ಅಲೋ ಮಾಡುತ್ತೇನೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ್ :- ಸುಮಾರು ಪ್ರಶ್ನೆಗಳನ್ನು ಅರ್ಧಗಂಟೆ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೋರಿದರೂ ಈಲಾಗಾಯ್ತು ಒಂದನ್ನೂ ಚರ್ಚೆಗೆ ತೆಗೆದುಕೊಂಡಿಲ್ಲ.

ಅಧ್ಯಕ್ಷರು :- ಈಗ ನೀವು ಬರೆದು ಕಳುಹಿಸಿ. ಆಮೇಲೆ ನೋಡಿ.

**ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿ**

20 (233) ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?